ಅಸಲು ದಾವಾ ನಂ.148/2017
ಪಿ ಡಬ್ಲು-1

ದಿನಾಂಕಃ 18-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲುಃ- ಪ್ರತಿವಾದಿ** ನಂ.1 ಮತ್ತು 2 ರವರ **ಪರ ಶ್ರೀ. ವಿ ಬಿ ಟಿ ವಕೀಲರಿಂದ.**

ದಾವಾ ಆಸ್ತಿ ಜಮೀನಿನ ಸರ್ವೇ ನಂ.39/2 ಕ ಇರುತ್ತದೆ. ಮೂಲ ಪುರಷ ದೊಡ್ಡದುರುಗಪ್ಪನಿಗೆ ಸದರಿ ಆಸ್ತಿಯು ಆತನ ಅಜ್ಜನಿಂದ ಬಂದಿರುತ್ತದೆ. ಸದರಿ ಆಸ್ತಿಯು ನನ್ನ ತಂದೆಯ ತಾಯಿಯ ಅಪ್ಪನಿಂದ ಬಂದಿರುತ್ತದೆ. ಈ ಕುರಿತು ನಾನು ಈ ದಾವೆಯಲ್ಲಿ ಕಾಗದ ಪತ್ರ ಹಾಜರುಪಡಿಸಿರುತ್ತೇನೆ. ಹಾಗೇ ಯಾವ ವರ್ಷದಲ್ಲಿ ಅವರಿಗೆ ಆಸ್ತಿ ಬಂದಿರುತ್ತದೆ ಎಂದು ಗೊತ್ತಿಲ್ಲ. ದೊಡ್ಡದುರುಗಪ್ಪನ ತಂದೆಯ ಹೆಸರು ಮರಿಯಪ್ಪ ಇತ್ತು. ಮರಿಯಪ್ಪ ಇವರಿಗೆ ತನ್ನ ಜೀವಿತ ಅವಧಿಯಲ್ಲಿ ಅವರ ತಂದೆಯಿಂದ ಯಾವುದೇ ಆಸ್ತಿ ಬಂದಿರಲಿಲ್ಲ ಎಂದರೆ ಸರಿಯಲ್ಲ. ಮರಿಯಪ್ಪ ತೀರಿಕೊಂಡಾಗ ನಾನು ಇನ್ನೂ ಚಿಕ್ಕವಳು ಇದ್ದೆ. ಮರಿಯಪ್ಪ ತೀರಿಕೊಂಡ ನಂತರ ದೊಡ್ಡದುರುಗಪ್ಪನಿಗೆ ಯಾವ ವರ್ಷದಲ್ಲಿ ಆಸ್ತಿ ಬಂತು ಎಂದು ಹೇಳಲು ಬರುವುದಿಲ್ಲ. ಮರಿಯಪ್ಪನಿಗೆ ತನ್ನ ಸ್ವಂತ ದುಡಿಮೆಯ ಆಸ್ತಿ ಇಲ್ಲವೇ ಹಿರಿಯರಿಂದ ಬಂದ ಯಾವುದೇ ಆಸ್ತಿಗಳು ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಪಹಣಿಗಳಲ್ಲಿ ಈಗ ನನ್ನ ಅಣ್ಣ-ತಮ್ಮಂದಿರ ಹೆಸರುಗಳು ನಮೂದು ಇರುತ್ತವೆ. ನಿಂಗಪ್ಪ, ಗುಡ್ಡಪ್ಪ , ದೊಡ್ಡದುರುಗಪ್ಪ ಇವರ ಹೆಸರುಗಳು ನಮೂದು ಇರುತ್ತವೆ. ದೊಡ್ಡದುರುಗಪ್ಪನ ಜೀವಿತ ಕಾಲದಲ್ಲಿ ಅವನ ಹೆಸರು ಮಾತ್ರ ಪಹಣಿಯಲ್ಲಿ ನಮೂದು ಇತ್ತು ಎಂದರೆ ಸರಿಯಲ್ಲ. ದೊಡ್ಡದುರುಗಪ್ಪನಿಗೆ ಆಸ್ತಿಗಳು ಹಿರಿಯರಿಂದ ಬಂದಿರುತ್ತವೆ. ದೊಡ್ಡದುರುಗಪ್ಪ ಯಾವ ಇಸವಿಯಲ್ಲಿ ತೀರಿಕೊಂಡಿರುತ್ತಾರೆ ಎಂದು ಗೊತ್ತಿಲ್ಲ. ನನ್ನ ತಂದೆ ತೀರಿಕೊಂಡು ಈಗ 24 ವರ್ಷ ಆಯಿತು. ನನ್ನ ತಾಯಿ ದ್ಯಾಮವ್ವ ತೀರಿಕೊಂಡು ಈಗ 20 ವರ್ಷ ಆಯಿತು. ನನ್ನ ತಂದೆಗೆ ದಾವಾ ಆಸ್ತಿಗಳನ್ನು ಹೊರತುಪಡಿಸಿ ಬೇರೆ ಯಾವ ಆಸ್ತಿಗಳು ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಅವುಗಳನ್ನು ಅಣ್ಣ-ತಮ್ಮಂದಿರಿಗೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಅವುಗಳನ್ನು ನನ್ನ ತಂದೆ ಜೀವಿತ ಇರುವಾಗಲೇ ಅವರ ಸಹೋದರರಿಗೆ ಪಾಲು ಮಾಡಿ

ಕೊಟ್ಟಿರುತ್ತಾರೆ. ಹಾಗೇ ಯಾವ ಇಸವಿಯಲ್ಲಿ ಪಾಲು ಆಗಿರುತ್ತದೆ ಎಂದು ಗೊತ್ತಿಲ್ಲ. ನನ್ನ ತಂದೆಯ ಸಹೋದರರಿಗೆ ಪಾಲಿನಲ್ಲಿ ಯಾವ ಸರ್ವೇ ನಂಬರ ಆಸ್ತಿಗಳು ನೀಡಲಾಗಿರುತ್ತದೆ ಎಂದು ಹೇಳಲು ಬರುವುದಿಲ್ಲ. ನನ್ನ ವಿವಾಹವಾಗಿ ಈಗ 30 ವರ್ಷ ಆಯಿತು. ದೊಡ್ಡದುರುಗಪ್ಪನಿಗೆ ಗಂಡು ಸಂತತಿ ಇರಲಿಲ್ಲ ಎಂದರೆ ಸರಿ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲನ್ನು ಪ್ರತಿವಾದಿ ನಂ.1 ಮತ್ತು 2 ರವರ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).